ಹೆಚ್ಚಾಗಿ ಬೆಳೆಯುತ್ತಿರುವುದರಿಂದ ಮತ್ತು ವಾಹನಗಳ ಸಂಖ್ಯೆ ಜಾಸ್ತಿಯಾಗುತ್ತಿರುವುದರಿಂದ ಇದರ ಬಗ್ಗೆ ಒಂದು ಮಾಸ್ಟರ್ ಪ್ಲಾನ್ ಮಾಡಿ, ಬೈಪಾಸ್ ರೋಡ್‌ಗಳಿಗೆ ಆದ್ಯತೆಯನ್ನು ಕೊಟ್ಟು, ನಗರದಲ್ಲಿ ಬಸ್ಸು ಹೋದರು, ಮಕ್ಕಳಿಗೆ, ಜನರಿಗೆ ಸಾವು ನೋವು ಆಗಿ ತೊಂದರೆಯಾಗುತ್ತಿರುವುದರಿಂದ ಈ ಬೈಪಾಸ್ ರೋಡ್‌ಗಳಿಗೆ 4-5 ವರ್ಷದಲ್ಲಿ ಆ ಮ್ಯಾಪ್‌ನ ಪ್ರಕಾರ ಹೈವೇಯ ಹತ್ತಿರ ಬರತಕ್ಕ ನಗರಗಳಿಗೆ ಪ್ರಿಯಾರಿಟಿ ಕೊಡುತ್ತೀರ ಎನ್ನತಕ್ಕ ಬಗ್ಗೆ ಕೇಳಬಯಸುತ್ತೇನೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ:- ಸಲಹೆ ಯೋಗ್ಯವಾಗಿದೆ, ಪರಿಶೀಲಿಸಲಾಗುವುದು.

ವಿಷಯ:- ಬಳಕೆದಾರರ ವೇದಿಕೆಗೆ ಅಧ್ಯಕ್ಷರ ನೇಮಕ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 65 (652)

ಶ್ರೀ ಯು.ಆರ್. ಸಭಾಪತಿ (ಉಡುಪಿ)

ಮಾನ್ಯ : ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ರಾಜ್ಯದಲ್ಲಿನ ಎಲ್ಲಾ ಜಿಲ್ಲಾ ಬಳಕೆದಾರರ ದೂರು ಪರಿಹಾರ ವೇದಿಕೆಗಳಿಗೆ ಅಧ್ಯಕ್ಷರುಗಳ ನೇಮಕವಾಗಿದೆಯೆ; ಇಲ್ಲದಿದ್ದಲ್ಲಿ, ಕಾರಣಗಳೇನು ಹಾಗೂ ಉಳಿದ ಅಧ್ಯಕ್ಷರುಗಳನ್ನು ಯಾವಾಗ ನೇಮಕ ಮಾಡಲಾಗುವುದು;

ಆ) ಇತ್ಯರ್ಥವಾಗದೇ ಬಾಕಿ ಇರುವ ಪ್ರಕರಣಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿ ಒದಗಿಸುವುದು).

ಇ) ಈ ವೇದಿಕೆಗಳಿಗೆ ಸರ್ಕಾರದಿಂದ ನೇಮಕಗೊಂಡ ಸದಸ್ಯರುಗಳು ವಿಚಾರಣೆಯಲ್ಲಿ ಹಾಜರಾಗದೆ ಇರುವ ಕಾರಣಗಳಿಂದಾಗಿ ಪ್ರಕರಣಗಳ ಇತ್ಯರ್ಥಗಳು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು?

ಈ) ರಾಜ್ಯದಲ್ಲಿ ಬಳಕೆದಾರರ ರಕ್ಷಣಾ ಕಾಯ್ದೆಯ ಪ್ರಕಾರ ಬಳಕೆದಾರರ ರಕ್ಷಣ ಮಂಡಳಿಯನ್ನು ಸರ್ಕಾರದವರು ಸ್ಥಾಪಿಸುವ ವಿಚಾರದಲ್ಲಿ ತಳೆದಿರುವ ನಿಲುವು ಏನು?

ಶ್ರೀ. ಎಸ್. ನಂಜಪ್ಪ

ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು

ಅ) ಇಲ್ಲ, ಕೋಲಾರ, ಚಿತ್ರದುರ್ಗ, ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಗುಲ್ಬರ್ಗಾ ಜಿಲ್ಲಾ ವೇದಿಕೆಗಳಿಗೆ ಅಧ್ಯಕ್ಷರನ್ನು ನೇಮಕ ಮಾಡುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ. ಶೀಘ್ರವಾಗಿ ಈ ಹುದ್ದೆಗಳನ್ನು ತುಂಬಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಆ) ಅನುಬಂಧದಲ್ಲಿ ಕೊಡಲಾಗಿದೆ.

ಇ) ಇಂತಹ ಸಂದರ್ಭ ಉದ್ಭವಿಸಿದಾಗ, ಅಂತಹವರನ್ನು ಸದಸ್ಯತ್ವದಿಂದ ತೆಗೆಯುವ ಕ್ರಮ ತೆಗೆದುಕೊಳ್ಳಲಾಗಿದೆ. ಉದಾಹರಣೆಗೆ ಧಾರವಾಡ ಜಿಲ್ಲಾ ವೇದಿಕೆಯ ಅಧ್ಯಕ್ಷರ ವರದಿಯ ಮೇರೆಗೆ ವೇದಿಕೆಯ ಒಬ್ಬ ಸದಸ್ಯರನ್ನು ತೆಗೆಯಲಾಗಿದೆ. ಇಂತಹ ಸಂದರ್ಭ ಮುಂದೆಯೂ ಉದ್ಭವಿಸಿದಲ್ಲಿ ಅಂತಹವರನ್ನು ಸದಸ್ಯತ್ವದಿಂದ ಕೂಡಲೇ ತೆಗೆಯಲು ಸರ್ಕಾರವು ಹಿಂಜರಿಯುವುದಿಲ್ಲ.

ಈ) ರಾಜ್ಯ ಗ್ರಾಹಕರ ಹಿತರಕ್ಷಣಾ ಸಮಿತಿಯನ್ನು ಪುನರ್ ರಚಿಸುವ ಪ್ರಸ್ತಾವ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಅನುಬಂಧ

ಡಿಸೆಂಬರ್ 1994ರ ಜಿಲ್ಲಾ ವೇದಿಕೆ ಬಾಕಿ ಇರುವ ಪ್ರಕರಣಗಳ ವಿವರ ಪಟ್ಟಿ

ಕ್ರಮ ಸಂಖ್ಯೆ	ಜಿಲ್ಲಾ ವೇದಿಕೆ ಹೆಸರು	ಪ್ರಾರಂಭದ ಬಾಕಿ	ಸ್ವೀಕೃತಿ	ಒಟ್ಟು	ವಿಲೇವಾರಿ	ಬಾಕಿ
1.	ಬೆಂಗಳೂರು ನಗರ:	5.301	150	545	156	5295
2.	ಬೆಂಗಳೂರು (ಗ್ರಾ):	46	06	02	02	50
3.	ಬೆಂಗಳೂರು ಹೆಚ್ಚುವರಿ:	848	-	848	02	846
4.	ಕೋಲಾರ:	191	14	205	8	197
5.	ತುಮಕೂರು:	330	19	349	34	315
6.	ಚಿತ್ರದುರ್ಗ	336	8	344	-	344
7.	ಶಿವಮೊಗ್ಗ:	144	11	155	18	137
8.	ಮಂಡ್ಯ	92	14	106	4	102
9.	ದಕ್ಷಿಣ ಕನ್ನಡ	879	49	928	1	927
10.	ಕೊಡಗು:	87	5	92	15	77
11.	ಹಾಸನ:	348	-	348	-	348
12.	ಚಿಕ್ಕಮಗಳೂರು:	264	5	269	5	264
13.	ಧಾರವಾಡ:	216	33	249	49	200
14.	ಕಾರವಾರ:	198	16	214	-	214
15.	ರಾಯಚೂರು:	140	11	151	12	139
16.	ಬಳ್ಳಾರಿ:	76	7	83	8	75
17.	ಬೀದರ್:	93	14	107	15	92
18.	ಮೈಸೂರು:	1022	37	1059	9	1050
19.	ಗುಲ್ಬರ್ಗ:	95	7	102	-	102
20.	ಬೆಳಗಾಂ:	396	22	418	-	418

ಶ್ರೀ ಯು.ಆರ್. ಸಭಾಪತಿ:- ಸನ್ಮಾನ್ಯ ಅಧ್ಯಕ್ಷರೆ, ಬಳಕೆದಾರರ ದೂರು ಪರಿಹಾರ ವೇದಿಕೆಗಳ ಕಛೇರಿಯಲ್ಲಿ ಗುಮಾಸ್ತರುಗಳಿಲ್ಲ, ಅಲ್ಲಿ ಸ್ಟಾಫ್‌ಗಳು ಇಲ್ಲ ಎನ್ನ ತಕ್ಕ ದೂರುಗಳು ಆಗಿದಾಂಗ್ಗೆ ಇದ್ದು ಸರ್ಕಾರ ಇದರ ಬಗ್ಗೆ ಗಮನಹರಿಸಿದೆಯೆ? ಇಲ್ಲಿ ರಾಜಕೀಯ ನೇಮಕಾತಿಯಿಂದ ಅನೇಕ ಅಡ್ಡಿ ಅಡಚಣೆಗಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ರಾಜಕೀಯ ನೇಮಕಾತಿಗಿಂತ ಒಬ್ಬರು ನಿವೃತ್ತ ನ್ಯಾಯಾಧೀಶರನ್ನು ಇಲ್ಲಿಗೆ ನೇಮಕ ಮಾಡಲು ಸಾಧ್ಯವಿಲ್ಲವೆ? ಮೂರನೆಯದಾಗಿ ಬಳಕೆದಾರರ ದೂರು ಪರಿಹಾರ ವೇದಿಕೆಗಳ ಅಸ್ತಿತ್ವ ಶೀಘ್ರ ನ್ಯಾಯವನ್ನು ಒದಗಿಸಿಕೊಡುವುದಾಗಿದೆ. ಆದರೆ ಇವತ್ತು ಒಂದು ದಿನದಲ್ಲಾಗುವಂಥ ತೀರ್ಮಾನಗಳು ಮುಂದೂಲ್ಬಡುತ್ತಿವೆ. ಪ್ರತಿಯೊಂದು ಸಂದರ್ಭದಲ್ಲಿ ಈ ವೇದಿಕೆಯ ಯಾರೊಬ್ಬರಾದರೂ ಸದಸ್ಯರು ಗೈರುಹಾಜರಾಗಿದ್ದರೆ, ಆ ದಿನ ಕಾರ್ಯ ಕಲಾಪವನ್ನು ಮಾಡುವುದಕ್ಕಾಗುತ್ತಿಲ್ಲ. ಅವರು ಈಗಾಗಲೇ ವೇದಿಕೆಯಲ್ಲಿ ಬಾಕಿ ಇರುವ ಪ್ರಕರಣಗಳ ಬಗ್ಗೆ ವಿವರಣೆಯನ್ನು ಕೊಟ್ಟಿದ್ದಾರೆ. ಇದನ್ನು ನೋಡಿದರೆ, ಸರ್ಕಾರ ಲಕ್ಷಗಟ್ಟಲೆ ಹಣವನ್ನು ಖರ್ಚು ಮಾಡಿ ಇಂಥ ವೇದಿಕೆಯನ್ನು ಸ್ಥಾಪನೆ ಮಾಡಿದೆ ಆದರೆ ಇದರಿಂದ ಯೋಗ್ಯವಾದ ಪರಿಹಾರ ಸಿಗುತ್ತಿಲ್ಲವೆನ್ನುವುದಕ್ಕೆ ಇಲ್ಲಿ ಬಾಕಿ ಇರುವ ಪ್ರಕರಣಗಳೆ ಸಾಕು. ಆದ್ದರಿಂದ ಈ ವೇದಿಕೆಯನ್ನು ಅತ್ಯಂತ ಪರಿಣಾಮಕಾರಿಯಾದ ವೇದಿಕೆಯನ್ನು ಅತ್ಯಂತ ಪರಿಣಾಮಕಾರಿಯಾದ ವೇದಿಕೆಯನ್ನಾಗಿ ಮೊದಲು ಸರ್ಕಾರ ಏನಾದರೂ ಕ್ರಮ ತೆಗೆದುಕೊಳ್ಳುತ್ತದೆಯೇ ಎಂಬ ಬಗ್ಗೆ ಸ್ಪಷ್ಟಪಡಿಸಬೇಕು.

ಶ್ರೀ ಎಸ್. ನಂಜಪ್ಪ: ಸನ್ಮಾನ್ಯ ಅಧ್ಯಕ್ಷರೆ, ಗ್ರಾಹಕರ ದೂರು ಪರಿಹಾರ ವೇದಿಕೆ ಕೊರತೆಯಿರುವ ಸಿಬ್ಬಂದಿಗಳನ್ನು ನೇಮಕ ಮಾಡಬೇಕು, ಅದು ಚೆನ್ನಾಗಿ ಕೆಲಸ ಮಾಡಬೇಕು ಎನ್ನತಕ್ಕ ವಿಚಾರವನ್ನು ಹೇಳಿದ್ದಾರೆ. ಸಿಬ್ಬಂದಿಯ ನೇಮಕಾತಿಯ ಬಗ್ಗೆ ಇದ್ದಂಥ ತೊಡಕನ್ನು ಸರ್ಕಾರ ನಿವಾರಣೆ ಮಾಡಿದೆ. ಈಗ ನೇಮಕಾತಿಯ ದಿಕ್ಕಿನಲ್ಲಿ ಕಾರ್ಯಕ್ರಮವನ್ನು ಹಾಕಿ ಕೊಂಡಿದ್ದೇವೆ. ನೇಮಕಾತಿಯಾದ ಕೂಡಲೆ ಸಿಬ್ಬಂದಿಗಳನ್ನು ಒದಗಿಸುತ್ತೇವೆ ಎನ್ನತಕ್ಕ ಮಾತನ್ನು ಹೇಳಬಯಸುತ್ತೇನೆ. ಈಗ ಕಾನೂನಿನಲ್ಲಿ ನಿವೃತ್ತ ನ್ಯಾಯಾಧೀಶರನ್ನು ನೇಮಕ ಮಾಡಿಕೊಳ್ಳ ಬೇಕೆಂದಿರುವಾಗ ಅದನ್ನು ಬದಲಾವಣೆ ಮಾಡುವುದಕ್ಕೆ ಬರುವುದಿಲ್ಲ ಮತ್ತು ಅಲ್ಲಿ ಯಾರು ಸದಸ್ಯರು ಚೆನ್ನಾಗಿ ಕೆಲಸ ಮಾಡುವುದಿಲ್ಲ ಅವರನ್ನು ತೆಗೆಯುವ ಕಾರ್ಯ ಕ್ರಮವನ್ನು ತೆಗೆದುಕೊಂಡಿದ್ದೇವೆ. ಧಾರವಾಡ ಜಿಲ್ಲಾ ಗ್ರಾಹಕರ ವೇದಿಕೆಯ ಅಧ್ಯಕ್ಷರು ಒಬ್ಬರು ಸದಸ್ಯರ ನಡವಳಿಕೆಯ ಬಗ್ಗೆ ಅಭಿಪ್ರಾಯವನ್ನು ವ್ಯಕ್ತಪಡಿಸಿ ತೆಗೆದು ಹಾಕಬೇಕೆಂದು ಪ್ರಸ್ತಾಪವನ್ನು ಕಳಿಸಿದಾಗ ಅವರನ್ನು ಈಗಾಗಲೆ ತೆಗೆದುಹಾಕಿದ್ದೇವೆ.

ಯಾವ ಸದಸ್ಯರು ಚೆನ್ನಾಗಿ ಕೆಲಸ ಮಾಡುವುದಿಲ್ಲ, ಆ ಫೋರಂನ ಅಧ್ಯಕ್ಷರು ಸರ್ಕಾರದ ಗಮನಕ್ಕೆ ತಂದಾಗ ಅವರ ಮೇಲೆ ಕ್ರಮ ತೆಗೆದುಕೊಳಲಿಕ್ಕೆ ಹಿಂದೆ ಜರಿಯುವುದಿಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಕೇಂದ್ರ ಸರ್ಕಾರದ ನೀತಿ ಈ ಗ್ರಾಹಕರ ವೇದಿಕೆಯನ್ನು ಬಲಪಡಿಸಬೇಕೆಂಬುದು ಆಗಿದೆ. ರಾಜ್ಯ ಸರ್ಕಾರವು ಈ ತತ್ವವನ್ನು ಒಪ್ಪಿಕೊಂಡಿರುವುದರಿಂದ ಈ ಗ್ರಾಹಕರ ವೇದಿಕೆಯನ್ನು ಬಲಪಡಿಸುವ ದಿಕ್ಕಿನಲ್ಲಿ

ಒಂದು ಉತ್ತಮವಾದ ಕಾರ್ಯಕ್ರಮವನ್ನು ನಮ್ಮ ಸರ್ಕಾರ ಹಮ್ಮಿಕೊಳ್ಳುತ್ತಿದೆ ಎನ್ನುವ ಒಂದು ಭರವಸೆಯನ್ನು ಈ ಸಂಧರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ.

ಡಾ: ಯು. ಆರ್. ಸಭಾಪತಿ:- ಅಡ್ಜಸ್ಟಿಮೆಂಟ್ಸ್ ಏನು ಕೊಡುತ್ತಿದ್ದಾರೆ. ಅದರ ಬಗ್ಗೆ ನಾನು ಸರ್ಕಾರದ ಗಮನವನ್ನು ಸೆಳೆಯತ್ತಿದ್ದೇನೆ, ಇದು ಸಿವಿಲ್ ಕೋರ್ಟ್‌ನಲ್ಲಿ ಏನಾಗುತ್ತಿದೆ ಅದೇ ರೀತಿಯ ಪ್ರೊಸೀಜರ್ ಈಗ ಬರುತ್ತಿದೆ. ಅದಕ್ಕೆ ಯಾವ ರೀತಿಯ ಆದೇಶವನ್ನು ನೀಡುತ್ತೀರಿ ಎಂಬುದನ್ನು ಕೇಳಬಯಸುತ್ತೇನೆ.

ಶ್ರೀ ಎಸ್. ನಂಜಪ್ಪ:- ಸನ್ಮಾನ್ಯ ಅಧ್ಯಕ್ಷರೆ, ಈ ಗ್ರಾಹಕ ವೇದಿಕೆಯ ಅಧ್ಯಕ್ಷರು ವಾರದಲ್ಲಿ ಎರಡು ದಿವಸ ಹಿಯರಿಂಗ್ ಇಟ್ಟುಕೊಳ್ಳುವಂತಹ ಪ್ರಕರಣವು ಉಂಟು. ನಾನು ಈಗಾಗಲೇ ಸೂಚನೆಯನ್ನು ಕೊಟ್ಟಿದ್ದೇನೆ. ವಾರಕ್ಕೆ - 5 ದಿವಸ ಸಿಟ್ಟಿಂಗ್ ಇರಬೇಕೆನ್ನುವ ಸೂಚನೆಯನ್ನು ಅದರ ಜೊತೆ ನಮ್ಮ ರಾಜ್ಯದ ಕಮಿಷನ್ ಛೇರ್ಮನ್‌ರೊಡನೆ ಪ್ರಸ್ತಾಪ ಮಾಡಿ, ಕೇಂದ್ರ ನ್ಯಾಷನಲ್ ಕಮಿಷನ್ ಚೇರ್ಮನ್ ಬಾಲಕೃಷ್ಣ ಹೆರಾಡಿ ಅವರೂ ಸಹ ಬಂದಿದ್ದರು. ಅವರ ಜೊತೆ ಪ್ರಸ್ತಾಪ ಮಾಡಿ ಈ ಶೀಘ್ರಗತಿಯಲ್ಲಿ ನ್ಯಾಯದಾನ ಮಾಡಬೇಕುನ್ನುವ ವಿಚಾರದಲ್ಲಿ ಚರ್ಚೆ ಮಾಡಿದ್ದೇವೆ. ಆ ತತ್ವವನ್ನು ನಮ್ಮ ರಾಜ್ಯದ ಕಮಿಷನ್ ಛೇರ್ಮನ್ನರು ಒಪ್ಪಿಕೊಂಡಿದ್ದಾರೆ. ಶೀಘ್ರ ನ್ಯಾಯದಾನಕ್ಕೆ ಸೂಕ್ತ ಕ್ರಮ ಕೈಕೊಳ್ಳುತ್ತೇವೆ ಎನ್ನುವ ವಿಚಾರವನ್ನು ಸನ್ಮಾನ್ಯ ಸದಸ್ಯರಿಗೆ ತಮ್ಮ ಮೂಲಕ ತಿಳಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ, ಮಾನ್ಯ ಮಂತ್ರಿಗಳು ಹೇಳಿದರೆ ಎಲ್ಲೆಲ್ಲಿ ದೂರು ಬಂದಿದೆ, ಅಂತಹ ಕಡೆ ನಾವು ಸದಸ್ಯರಿಗೆ ಡಿಸ್ಟ್ರಿಕ್ಟ್ ಕನ್ಸ್ಯೂಮರ್ ಕೋರಂನಿಂದ ನಾನ್ ಆಫಿಷಿಯಲ್ ಮೆಂಬರ್ಸ್‌ನ್ನು ತೆಗೆಯುತ್ತೇವೆ ಎಂದು ಹೇಳಿದರು. ಕಾನೂನಿನಲ್ಲಿ ಒಂದು ಸಾರಿ ಅಪಾಯಿಂಟ್‌ಮೆಂಟ್ ಆದಂತಹ ಸದಸ್ಯರು ಐದು ವರ್ಷ ಇರುತ್ತಾರೆ ಎನ್ನತಕ್ಕಂಥದ್ದು ಸ್ಪಾಚ್ಯುಟರಿ ಪ್ರಾವಿಷನ್ ಇದೆ. ಅದನ್ನು ಸಾರಾಸಗಟಾಗಿ ಎಲ್ಲರಿಗೂ ಕೂಡಲಾಗು ಮಾಡುತ್ತೀರೋ ಅಥವಾ ಎಲ್ಲೆಲ್ಲಿ ಅಲಿಗೇಷನ್ಸ್ ಬಂದಿದೆ ಅಂತಹ ಕಡೆ ಎನ್‌ಕ್ವೈರಿ ಮಾಡಿ ತಾವು ಬದಲಾವಣೆ ಮಾಡುತ್ತೀರೋ, ಎನ್ನತಕ್ಕಂಥಾದ್ದು ಹೇಳಬೇಕು.

ಶ್ರೀ ಎಸ್. ನಂಜಪ್ಪ:- ಸನ್ಮಾನ್ಯ ಅಧ್ಯಕ್ಷರೇ, ಈ ಕೋರಂನ ಕಾರ್ಯ ವೈಖರಿಯಲ್ಲಿ ರಾಜ್ಯ ಸರ್ಕಾರದ ಹಸ್ತಕ್ಷೇಪ ಇರುವುದಿಲ್ಲ. ಈ ಗ್ರಾಹಕರ ವೇದಿಕೆಯ ಅಧ್ಯಕ್ಷರು ಏನು ದೂರು ಕೊಡುತ್ತಾರೆ ಅಂತಹ ಪ್ರಕರಣಗಳಲ್ಲಿ ಮಾತ್ರ ನಾವು ಕ್ರಮ ಕೈಕೊಳ್ಳುತ್ತೇವೆಯೇ ವಿನಹ ಸಾರಾಸಗಟಾಗಿ ನಾವು ಕ್ರಮ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ ಎನ್ನುವ ಮಾತನ್ನು ಹೇಳುವುದಕ್ಕೆ ಇಷ್ಟ-ಪಡುತ್ತೇನೆ.

ಶ್ರೀ ಎನ್. ಯೋಗೀಶ್ ಭಟ್:- ಅಧ್ಯಕ್ಷರೆ, ನಾನು ಮಂತ್ರಿಗಳ ಹತ್ತಿರ ಕೇಳುತ್ತೇನೆ, ಅನೇಕ ಖಾಸಗೀಜಾಗೃತ ಬಳಕೆದಾರರ ಸಂಘಟನೆಗಳು ರಾಜ್ಯದಲ್ಲಿವೆ. ಇಂತಹ ಜಾಗೃತ

ಬಳಕೆದಾರರ ಸಂಘಟನೆಗಳಿಗೆ ಪ್ರೋತ್ಸಾಹ ಕೊಟ್ಟು, ಅದರ ಜೊತೆ ಅವರು ಕೇಳಿದ ಪ್ರಶ್ನೆಗಳಿಗೆ ಎಲ್ಲಾ ಸರ್ಕಾರಿ ಇಲಾಖೆಗಳು ಸೂಕ್ತ ಮಾಹಿತಿಯನ್ನು ಕೊಡುವಂತಹ ಅಧಿಕಾರ, ಅವರಿಗೆ ಬೇಕಾದಂತಹ ಸವಲತ್ತುಗಳನ್ನು ಕೊಡುವ ವ್ಯವಸ್ಥೆ ರಾಜ್ಯ ಸರ್ಕಾರ ಮಾಡಲು ಇಚ್ಛಿಸುತ್ತಿದೆ ಎಂಬುದು ಎಂದು ಪ್ರಶ್ನೆ. ಅದರ ಜೊತೆಯಲ್ಲಿ ಮಂಗಳೂರಿನಲ್ಲಿ ಡಿಸೆಂಬರ್ ಕೊನೆಯ ತನಕ 908 ಕೇಸ್‌ಗಳು ಮಾತ್ರ ದಾಖಲು ಆಗಿದ್ದು, ಯಾವುದೇ ಇತ್ಯರ್ಥ ಆಗದೆ ಇನ್ನೂ ಹಲವು ಕೇಸುಗಳು ಬರುತ್ತಾ ಇರುವುದರಿಂದ ಯಾವ ದಿವಸದ ಒಳಗಾಗಿ ಮಂಗಳೂರು ಕನ್ಸ್ಯೂಮರ್ಸ್ ದೂರು ವಿಭಾಗಕ್ಕೆ ತಾವು ಅಧ್ಯಕ್ಷರ ನೇಮಕ ಮಾಡುತ್ತೀರಿ ಎನ್ನುವುದು ಎರಡನೆಯ ಪ್ರಶ್ನೆಯಾಗಿದೆ.

ಶ್ರೀ ಎಸ್. ನಂಜಪ್ಪ:- ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿದ ಮೊದಲ ಪ್ರಶ್ನೆ ಗ್ರಾಹಕರ ವೇದಿಕೆಗಳಿಗೆ ವಿಚಾರಗಳನ್ನು, ವಿಷಯಗಳನ್ನು ಒದಗಿಸಿಕೊಡುವಂತಹ ಒಂದು ಕಾರ್ಯವನ್ನು ಸರ್ಕಾರ ಮಾಡಬೇಕೆಂದು ಕೇಳಿದ್ದಾರೆ. ಗ್ರಾಹಕರ ವೇದಿಕೆಗಳನ್ನು ಈ ಸರ್ಕಾರ ಬಲಪಡಿಸುವಂತಹ ಅವರಿಗೆ ಮಾಹಿತಿ ಕೊಡುವಂತಹ, ದಿಕ್ಕಿನಲ್ಲಿ ಒಂದು ಉತ್ತಮ ಸಲಹೆಯನ್ನು ಮಾನ್ಯ ಸದಸ್ಯರು ಕೊಟ್ಟಿದ್ದಾರೆ. ಅದನ್ನು ತೀವ್ರವಾಗಿ ಪರಿಶೀಲನೆ ಮಾಡುತ್ತೇವೆ. ಮತ್ತು ಮಂಗಳೂರಿನ ಗ್ರಾಹಕರ ವೇದಿಕೆಗೆ ನ್ಯಾಯಾದೀಶರನ್ನು ನೇಮಕ ಮಾಡಬೇಕು ಎನ್ನತಕ್ಕಂತಹ ವಿಚಾರವನ್ನು ಸದಸ್ಯರು ಹೇಳಿದ್ದಾರೆ. ಕೆಲವೇ ದಿನಗಳಲ್ಲಿ ಮಂಗಳೂರಿನ ಗ್ರಾಹಕರ ವೇದಿಕೆಗೆ ಅಧ್ಯಕ್ಷರನ್ನು ನೇಮಕ ಮಾಡಲಾಗುತ್ತದೆ ಎನ್ನುವ ಭರವಸೆಯನ್ನು ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಿಗೆ ತಮ್ಮ ಮೂಲಕ ನೀಡಲು ಇಚ್ಛಿಸುತ್ತೇನೆ.

ವಿಷಯ:- ಬೆಂಗಳೂರು - ಮೈಸೂರು ಹೆದ್ದಾರಿ ಎಕ್ಸ್‌ಪ್ರೆಸ್ ರಸ್ತೆಯಾಗಿ ಪರಿವರ್ತನೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 66(594)

ಶ್ರೀ ಕೆ. ಎನ್ ನಾಗೇಗೌಡ (ಕಿರುಗಾವಲು)

ಮಾನ್ಯ : ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ಬೆಂಗಳೂರು - ಮೈಸೂರು ರಾಜ್ಯ ಹೆದ್ದಾರಿಯನ್ನು ಎಕ್ಸ್‌ಪ್ರೆಸ್ ರೋಡ್ ಮಾಡಲು ಸರ್ಕಾರದವರು ಪರಿಶೀಲಿಸುವರೆ.

ಆ) ಹಾಗಿದ್ದರೆ ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಶಿವಾನಂದ ಹೆಚ್. ಕೌಜುಲಗಿ: ಲೋಕೋಪಯೋಗಿ ಸಚಿವರು

ಅ) ಇಲ್ಲ. ಪ್ರತ್ಯೇಕವಾದ ವೇಗದ ಹೆದ್ದಾರಿ ನಿರ್ಮಿಸಲು ಪ್ರಸ್ತಾಪಿಸಲಾಗಿದೆ.

ಆ) ಈಗ ಇರುವ ಬೆಂಗಳೂರು- ಮೈಸೂರು ರಾಜ್ಯ ಹೆದ್ದಾರಿಯನ್ನು ಸುಸ್ಥಿತಿಯಲ್ಲಿಡಲಾಗಿದೆ.